# ವಚನ ಸಾಹಿತ್ಯ : ಬಹುಮುಖಿ ಅಧ್ಯಯನದ ನೆಲೆಗಳು

## ರಾಷ್ಟ್ರಮಟ್ಟದ ವಿಚಾರ ಸಂಕಿರಣದಲ್ಲಿ ಮಂಡನೆಯಾದ ಪ್ರಬಂಧಗಳು









## ಸಂಪುಟ - ೧








ಗೌರವ ಸಂಪಾದಕರು :

ಪ್ರೊ. ಶಿವಣ್ಣಗೌಡ,
ಪ್ರಾಂಶುಪಾಲರು

ಸಂಪಾದಕರು :

ರವಿ ಎನ್. ಸಿ.,
ಮುಖ್ಯಸ್ಥರು, ಕನ್ನಡ ವಿಭಾಗ



ಆಯೋಜಕರು
ಕನ್ನಡ ವಿಭಾಗ
ಸರ್ಕಾರಿ ಗೃಹವಿಜ್ಞಾನ ಕಾಲೇಜು
ಹಾಸನ - 573202

| | | |
|---|---|---|
| Copy Right | : | Principal, Government Home Science College, Salagame Road, Hassan - 573202 |
| First Edition | : | February 2018 |
| ISBN No. | : | 978-81-933447-2-9 |
| Book Version | : | Paperback |
| Type | : | Edited Book |
| Title | : | Vachana Saahitya: Bahumukhi Adhyayanada Nelegalu |
| Published by | : | Department of Kannada, Government Home Science College, Hassan |
| Book Description | : | Proceedings of National Level Seminar on Vachana Saahitya: Bahumukhi Adhyayanada Nelegalu |

17. ಮಹಿಳಾ ವಚನಕಾರ್ತಿಯರ ಬಹುಮುಖಿ ವ್ಯಕ್ತಿತ್ವ 71
ಸಿ ಎಸ್ ಮೋಹನ್ ಮತ್ತು ದುಮ್ಮೇಗೌಡ

18. ವಚನ ಸಾಹಿತ್ಯದಲ್ಲಿ ಲಿಂಗಾಂಗ ಸಾಮರಸ್ಯ 78
ಡಾ. ಸಿ. ಟಿ. ಜಯಣ್ಣ

19. ಪ್ರಾಯೋಗಿಕ ವಿಮರ್ಶೆಯ ಹಿನ್ನೆಲೆಯಲ್ಲಿ ಆಯ್ದ ವಚನಗಳ ವಿಶ್ಲೇಷಣೆ: 84
ಚೈತ್ರ ಎಂ. ಕೆ

20. ಅಲ್ಲಮನ ಕಾಲಕೇಂದ್ರಿತ ವಚನ ವಿಶ್ಲೇಷಣೆ 89
ಚಂದ್ರಕಲ ಹೆಚ್. ಪಿ.

21. ಶಿವಶರಣೆ ಹಡಪದ ಲಿಂಗಮ್ಮನ ತಾತ್ವಿಕ ನಿಷ್ಠೆ
ಡಾ. ಎಚ್. ಎಮ್. ಚನ್ನಪ್ಪಗೋಳ 92

22. ಓದುಗರ ದೃಷ್ಟಿಯಲ್ಲಿ ಮುಖ್ಯವಾಹಿನಿಯಿಂದ ಹೊರಗುಳಿದ ಆಪ್ರಚಲಿತ ವಚನಕಾರರ ವಚನಗಳ ಚಿಂತನೆಗಳು
ಚೌಡೇಶ .ಎಸ್ 95

23. **Reflections on the socio religious impact of Vachana literature during medieval period - political perspectives**
**D.B. Channabasappa** 99

24. ವೀರ ಶೈವ ಚಳುವಳಿ – ಸಮಾಜೋ– ಧಾರ್ಮಿಕ ಪ್ರಭಾವ –ಒಂದು ವಿಶ್ಲೇಷಣೆ
ಡಾ. ವೀಣಾ ಹೆಚ್. ಎನ್. 102

25. **Basaveshwara and Global developments of Twelfth century - contextual and comparative similarities - a critique**
**Dr. Vidya. H. N.** 105

26. ವಚನ ಸಾಹಿತ್ಯದ ಕಾಯಕ ದಾಸೋಹ ಪರಿಕಲ್ಪನೆ ಸಾಮಾಜಿಕ ನ್ಯಾಯ
ಡಾ. ಎ. ವ್ಹಿ. ದೇವಾಂಗಮಠ ಮತ್ತು ಪ್ರೊ. ವೀಣಾ ತಿರ್ಲಾಪೂರ. 108

27. ಪ್ರಾಯೋಗಿಕ ವಿಮರ್ಶೆಯ ಹಿನ್ನಲೆಯಲ್ಲಿ ಆಯ್ದ ವಚನಗಳ ವಿಶ್ಲೇಷಣೆ
ಪಿ. ಕೆ. ಧನಂಜಯ 113

28. ವಚನ ಸಾಹಿತ್ಯದ ಅನುಸಂಧಾನ ಮತ್ತು ಜಾತಿಯ ಪ್ರಶ್ನೆಗಳು
ದಿನೇಶ್ ಕೆ. ಎಸ್. 115

29. ವಚನಸಾಹಿತ್ಯದಲ್ಲಿ ಕಾಯಕ ನಿರತ ಮಹಿಳೆಯರು
ಡಾ. ದಿವ್ಯ ಕೆ. ಎಲ್. 119

30. ವಚನಗಳಲ್ಲಿ ವೈಚಾರಿಕ ಪ್ರಜ್ಞೆಯ ಮೌಲ್ಯಾಧಾರಿತ ಚಿಂತನೆಗಳು
ದೊರೇಶ ಮತ್ತು ಡಾ. ಪಿ. ಎಂ. ಗಂಗಾಧರಯ್ಯ 122

31. ವಚನ ಸಾಹಿತ್ಯದಲ್ಲಿ ಕಾಯಕ–

# ವಚನ ಸಾಹಿತ್ಯದಲ್ಲಿ ಲಿಂಗಾಂಗ ಸಾಮರಸ್ಯ

ಡಾ. ಸಿ. ಟಿ. ಜಯಣ್ಣ*

ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ಬಸವಾದಿ ಶರಣ–ಶರಣೆಯರ ವಚನಗಳಿಗೆ ಮಹತ್ವದ ಸ್ಥಾನವಿದೆ.ಲೌಕಿಕ ಜೀವ... ಆದರ್ಶಗಳನ್ನು ಎತ್ತಿ ಹಿಡಿಯುವುದರ ಜೊತೆಗೆ ಪಾರಲೌಕಿಕ ಜೀವನದ ಪಥವನ್ನು ಶರಣರು ಅರುಹಿದ್ದಾರೆ.ಜಗತ್ತ... ನಿರ್ಮಾಣ ಮಾಡಿದ ಕರ್ತೃ ಮತ್ತು ಅವನ ಸ್ವರೂಪವನ್ನು ಶರಣರು ಅರಿತುಕೊಂಡಿದ್ದರು. ಸಷ್ಟಿಯು ಅವಿರ್ಭ... ವಿಸ್ಮಯಕಾರಿ ಅಂಶವನ್ನು ವಚನಗಳಲ್ಲಿ ತೋರಿದ್ದಾರೆ.ಶರಣರು ದೇವರ ಕಲ್ಪನೆಗೆ ನೀಡಿದ ಹೆಸರು 'ಬಯಲು' ಅಥ... 'ಶೂನ್ಯ ಎಂದು. ಅಂದರೆ ಸತ್ ಚಿತ್ ಆನಂದ ಅಖಂಡ ಪರಿಪೂರ್ಣ ನಾದ ಪರಮಾತ್ಮನು ತನ್ನ ಲೀಲೆ... ಸಷ್ಟಿ–ಸ್ಥಿತಿ–ಲಯಗಳಿಗೆ ಕಾರಣ ಕರ್ತೃವಾಗಿ, ಜಗತ್ತಿನ ಆದಿ, ಮಧ್ಯ, ಅವಸಾನ (ಅಂತ್ಯ)ಕ್ಕೂ ಮೀರಿದ ಅ... ಚೇತನವೇ ಆಗಿದ್ದಾನೆ. ಪರಮಾತ್ಮನು ಸಮಸ್ತ ವಿಶ್ವಕ್ಕೆ ಆಧಾರ. ಆತ್ಮವೆಂದರೆ ವಿಸ್ತಾರ; ಪರಮಾತ್ಮ ಚೇತನವೇ... ಅದಕ್ಕಿಂತಲೂ ವಿಸ್ತಾರವಾದುದು ಯಾವುದೂ ಇಲ್ಲ. ಹೀಗಾಗಿ ಅದು ಜಗದಗಲ, ಮುಗಿಲಗಲ ಮತ್ತು ಮಿಗೆಯಗಲ... ಸರ್ವಶೂನ್ಯ.ಶೂನ್ಯದ ಪರಿಕಲ್ಪನೆ ಬಹು ಅಗಾಧವಾದುದು; ಸಾಮಾನ್ಯ ಬುದ್ಧಿ ಗೋಚರವಾಗದ ಅಗಮ್ಯ ... ಇಂದ್ರಿಯಗಳಿಗೆ ಅತೀತವಾದದ್ದು.ಇಂತಹ ಪರಾತ್ಪರ ಚೆತನ್ಯ ವಸ್ತುವೇ 'ಲಿಂಗ'.

ಅಂಗವು ಸೃಷ್ಟಿಯ ಪಂಚಮಹಾಭೂತಗಳಿಂದ ನಿರ್ಮಿತವಾಗಿದೆ.ಅದು ಪ್ರಕೃತಿಯ ಭಾಗ; ಅಂದರೆ ಅಂಗ... ಮೂಲತಃ ಶೂನ್ಯ ಅಥವಾ ಮಹಾಲಿಂಗ ಚೈತನ್ಯದ ಭಾಗವೇ ಆಗಿದೆ. ಅಂಗಕ್ಕೆ ಸತ್, ಚಿತ್, ಆನಂದ, ... ಪರಿಪೂರ್ಣ ಎಂಬ ಪರಮಾತ್ಮನ ಲಕ್ಷಣಗಳು ಪರಿಮಿತ ಭಾವದಲ್ಲಿ ಅವ್ಯಕ್ತರೂಪವಾಗಿ ಅಡಗಿವೆ. ಜೀವಾತ್ಮನ ... ಪ್ರಾಕೃತಿಕ ಭೌತಿಕ ಅಂಗದಲ್ಲಿ ನೆಲೆಸಿ, ಲೌಕಿಕ ಸೌಖ್ಯದ ಕಡೆಗೆ ಲಕ್ಷವಿರಿಸಿ (ಗಮನಿಸಿ), ಮರೆವು ಮತ್ತು ಅಜ್ಞಾನದ... ತನ್ನ ಮೂಲ ಸ್ವರೂಪವನ್ನು ಮರೆತಿರುವುದಲ್ಲದೆ, ಸಂಸಾರದ ಭವಬಂಧನದಲ್ಲಿ ಸಿಲುಕಿ, ಕರ್ಮದ ಬಲೆಯಲ್ಲಿ ... ಮಾಯೆಯ ಪಂಜರದಲ್ಲಿ ಬಂಧಿತವಾಗಿರುತ್ತದೆ. ಇಂತಹ ದಯನೀಯ ಸ್ಥಿತಿಯಲ್ಲಿ ಗುರುವಿನ ಮಾರ್ಗದರ್ಶನ... ಬೆಳಕಿನಲ್ಲಿ, ಅಂಗವು ತನ್ನ ಮೂಲ ಚೈತನ್ಯವಾದ ಲಿಂಗವಾಗಲು ನೆರವಾಗುವ ಮಾರ್ಗವೇ 'ನಿವೃತ್ತಿ ಮಾರ್ಗ'.ಇದ... ಕ್ರಮಬದ್ಧವಾಗಿಸಿ, ದಾರ್ಶನಿಕ ಆಯಾಮವನ್ನು ನೀಡಿ ಷಟಸ್ಥಲ ಪಥವೆಂದು ಶರಣರು ಕರೆದಿದ್ದಾರೆ. ಮುಖ್ಯ... ಗಮನಿಸಬೇಕಾದ ಅಂಶವೆಂದರೆ ಅಂಗ ಮತ್ತು ಲಿಂಗ ಎಂದು ಇಬ್ಭಾಗವಾದುದು ಪರಮಾತ್ಮ ಚೈತನ್ಯದ ಸ... ಸ್ವಭಾವವೇ ಹೊರತು ಬೇರೆ ಕಾರಣಗಳಿಲ್ಲ. ಅಂಗ ಮತ್ತು ಲಿಂಗ ಒಂದೇ ಮೂಲ ವಸ್ತುವಿನಿಂದ ಹೊರಹೊಮ್ಮಿದ್ದು... ಈ ಪ್ರಕ್ರಿಯೆಯಲ್ಲಿ ಮರೆವೆಂಬ ಮಾಯೆಯ ಹಿಡಿತದಿಂದಾಗಿ ಅಂಗನು ಜೀವ ಭಾವವೇ ಪರಮಸತ್ಯವೆಂದು ... ಭವಕ್ಕೆ ಒಳಗಾಗಿರುವುದನ್ನು ಕಾಣಬಹುದು.

ಸಾಮಾನ್ಯ ಅರ್ಥದಲ್ಲಿ ಅಂಗವೆಂದರೆ ಪಂಚೇಂದ್ರಿಯ ಯುಕ್ತವಾದ ಶರೀರ.ಈ ಶರೀರವು ಕಾಮಾದಿ ಅರಿಷಡ್ವರ್ಗಗ... ಕುಲಾದಿ ಅಷ್ಟಮದಗಳು, ಜೀವಭಾವ ಮುಂತಾದವುಗಳನ್ನು ತುಂಬಿಕೊಂಡು ಮಲಿನಗೊಂಡಿದೆ.ಇದಕ್ಕೆ ಅರಿ... ಸಿಂಚನವಾದರೆ ಅದುವೇ 'ಅಂಗ' ಅಥವಾ 'ಶುದ್ಧಾಂಗ' ವೆನಿಸುತ್ತದೆ.ಶರೀರವು ಅಂಗವಾಗಬೇಕಾದರೆ ದೇಹ, ಮನಸ್ಸು... ಚಿತ್ತ ಮತ್ತು ಆತ್ಮಗಳು ಮನಸ್ಸಿನ ವಿಚಾರ, ವಿವೇಕ, ಎಲ್ಲವೂ ಶುದ್ಧೀಕರಣ ಗೊಳ್ಳಬೇಕು.ಅದಕ್ಕೆ ಸಂಸ್ಕಾರ ... ಸಾಧನೆ ಅತ್ಯವಶ್ಯಕ.ಸಾಧಕನ ನಡೆ–ನುಡಿ ಶುದ್ಧವಾಗಬೇಕು.ಕಾಯವನ್ನು ಸಾಧನಾಂಗವನ್ನಾಗಿ ಪರಿವರ್ತಿಸಬೇಕು. ... ಅಂಗವೆಂಬ ಹದವಾಗಿರುವ ಭೂಮಿಯ ಮೇಲೆ ಲಿಂಗವೆಂಬ ಸುಜ್ಞಾನದ ಬೆಳೆಯನ್ನು ಬೆಳೆಯಲು ಸಾಧ್ಯವಾಗುತ್ತ... ಅರ್ಥಾತ್ ಅಂಗವು ಶಿವಯೋಗ ಸಾಧನೆಗೆ ಮಾಧ್ಯಮವಾಗುತ್ತದೆ. ಇಂತಹ ಪರಿವರ್ತನೆ ಹೊಂದಿದ ಅಂಗವಿ... ಯಾವುದೇ ಆಧ್ಯಾತ್ಮಿಕ ಸಾಧನೆ ಸಾಧ್ಯವಾಗುವುದಿಲ್ಲ.

ಲಿಂಗಾಂಗ ಸಾಮರಸ್ಯಕ್ಕೂ ಪೂರ್ವದಲ್ಲಿ ಸಾಧಕನಿಗೆ ಉಂಟಾಗುವ ತೀವ್ರ ಹಂಬಲವು ಲಿಂಗದ ವಿರಹ ಮತ್ತು ನೆನಹ... ಸಹಾಯದಿಂದ ಮುಂದುವರೆಯುತ್ತದೆ. ಅನಂತತೆಯತ್ತ ಸಾಗುವ ಅಂಗನು ಲಿಂಗದೊಡನೆ ಅವಿನಾಭಾವ ಸಂಬಂಧ... ವನ್ನು ಹೊಂದಬೇಕಾಗುತ್ತದೆ.ಅದನ್ನೇ ಶರಣರು, 'ಶರಣ ಸತಿ ಲಿಂಗಪತಿ ಭಾವ' ಎಂದು ಕರೆದಿದ್ದಾರೆ. 'ಸಾಮರಸ್ಯ... ಎಂಬುದು ಎರಡೂ ಕಡೆಯ ಪ್ರಕ್ರಿಯೆ.ಅಂಗವು ತಾನು ಲಿಂಗದಲ್ಲಿ ಒಂದಾಗಿದ್ದೇನೆ ಎಂಬ ಭಾವ ತಳೆಯುತ್ತದೆಯೇ... ವಿನಃ ಲಿಂಗವು ಅಂಗದಲ್ಲಿ ಬೆರೆತು ಸಾಮರಸ್ಯದ ಭಾವ ತಳೆಯುವುದಿಲ್ಲ. ಆದ್ದರಿಂದ ಲಿಂಗಭಾವದಿಂದ ಅಂಗದ... ಅಂಗಭಾವದಿಂದ ಲಿಂಗದೊಡನೆ ಸಮರಸಗೊಳಿಸಿದಾಗ ಶೂನ್ಯದತ್ತ ಪ್ರಯಾಣವು ಅನುಭವಕ್ಕೆ ಬರುವುದು.ಇಲ್ಲಿ 'ಸಾ... ಎಂಬುದು ಬಯಲಾಗುವುದು. ಬಯಲಿನೊಳಗಿರುವ ಎಲ್ಲಾ ವಸ್ತುಗಳಿಗೂ ಮಿತಿಯೆಂಬುದಿದೆ. ಆದರೆ ಬಯಲ...

---

* ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಜೆ.ಎಮ್. ಮಹಿಳಾ ಕಾಲೇಜು, ಚಿತ್ರದುರ್ಗ–577 501, ಮೊ.98868407...
ಮೇಲ್–jayannact@gmail.com

**ಎನಗೊಂದು ಲಿಂಗ ನಿನಗೊಂದು ಲಿಂಗ**

ಮನೆಗೊಂದು ಲಿಂಗವಾಯಿತ್ತು
ಹೋಯಿತಲ್ಲಾ ಭಕ್ತಿ ಜಲವ ಕೂಡಿ
ಮನ ಮುಟ್ಟದ ಲಿಂಗವ ಉಳಿ ಮುಟ್ಟಬಲ್ಲದೆ ಗುಹೇಶ್ವರಾ

ಕುರುಹ ಇರುವುದು ಅರಿವನ್ನು ಹೊಂದಲು. ಗುರುವು ಮಹಾಲಿಂಗದ ಕುರಿತಾಗಿ ಮಾನವನು ಅಜ್ಞಾನದ ಮರೆಹಿನಲ್ಲಿ ಇರುವಾಗ, ಅರಿವಿನ ಬೆಳಕು ಮೂಡಲು ಕರಸ್ಥಲಕ್ಕೆ ಲಿಂಗವನ್ನು ದಯಪಾಲಿಸುತ್ತಾನೆ. ಇದನ್ನರಿಯದ ಜನರು ಗುರುವು ಕೊಟ್ಟ ಲಿಂಗಗಳಲ್ಲಿ ಭೇದ ಮಾಡಿ, ಇತರೆ ಅನೇಕ ಕುರುಹುಗಳನ್ನು ಅಪ್ಪುತ್ತಿರುವುದು ಭಕ್ತಿ ಸಾಧನೆಗೆ ಅಡ್ಡಿಯಾಗಿದೆ.

ವೈಯಕ್ತಿಕ ಸಾಧನೆಗೊಂದು ಲಿಂಗ, ನನ್ನೊಡನಿರುವವರ ಸಾಧನೆಗಿರುವ ಲಿಂಗ ಬೇರೆ.ಮನೆಗೊಂದು ಬೇರೆ ಎಂದು ಕೆಲವರು ಭಾವಿಸುತ್ತಾರೆ.ಅವರ ದೃಷ್ಟಿಯಲ್ಲಿ ಈ ಲಿಂಗಗಳೆಲ್ಲಾ ಬೇರೆ ಬೇರೆ.ಆ ಭೇದ ಭಾವದಿಂದಲೇ ಅವರು ಲಿಂಗಕ್ಕೆ ಭಕ್ತಿಯನ್ನು ಮಾಡುತ್ತಾರೆ.ಮತ್ತೆ ಕೆಲವರೂ ಈ ಭೇದಗಳ ಕುರಿತಾಗಿ ವಿಪರೀತ ಚಿಂತಿಸಿ ಸಮಯವನ್ನು ವ್ಯರ್ಥ ಮಾಡುವರು.ಈ ರೀತಿಯಾದ ಭೇದಗಳಿಂದ ಕೂಡಿದ ಭಕ್ತಿ ಸಾಧನೆ ವ್ಯರ್ಥ.ಬಹಿರಂಗ ಸಾಧನೆಗೆ ರೂಪುಗೊಂಡ ಲಿಂಗಗಳು ವ್ಯಕ್ತಿಯಿಂದ ವ್ಯಕ್ತಿಗೆ, ಮನೆಯಿಂದ ಮನೆಗೆ ಭಿನ್ನ.ಈ ಲಿಂಗಗಳೇ (ಕುರುಹು) ನಿಜವಾದ ಲಿಂಗವೆಂದು ನಂಬಿ ಭಕ್ತಿಯನ್ನು ಮಾಡುತ್ತಾರೆ.ಆದರೆ ಕುರುಹಿನ ಭಾವದಲ್ಲಿರುವ ಅರಿವನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗುತ್ತಾರೆ. ಲಿಂಗದ ನಿಜವನರಿತು ಅರ್ಚಿಸದಿದ್ದರೆ ಅವರ ಭಕ್ತಿ ವ್ಯರ್ಥವಾಗಿ ಹೋಗುತ್ತದೆ. ಲಿಂಗವೆಂದರೆ ಪರಮ ಪ್ರಕಾಶದ ಚಿದ್ಬೆಳಕು. ಅಗಮ್ಯ, ಅಪ್ರಮಾಣ, ಅಪ್ರತಿಮ ತತ್ವ.ಅದು ಎಷ್ಟು ಸೂಕ್ಷ್ಮವೆಂದರೆ, ಮನಸ್ಸು ಕೂಡ ಮುಟ್ಟಿರಲಾರದು. ವಾಙ್ಮನಾತೀತ.ರೂಪವೇ ಇಲ್ಲವೆಂದ ಮೇಲೆ, ಇಲ್ಲದಿರುವುದನ್ನು ಹೇಗೆ ಎರಡಾಗಿ ಮಾಡಬೇಕು? ಮನಸ್ಸಿನಂತಹ ಸೂಕ್ಷ್ಮ ತತ್ವಕ್ಕೆ ನಿಲುಕದ ಲಿಂಗ.ಮುಂದುವರೆದು, ಉಳಿಯ ಪೆಟ್ಟು ಎಷ್ಟು ಬೇಕಾದರು ಬಿದ್ದರೂ ರೂಪಕ್ಕೆ ವಿರೂಪ ತರಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ದೈಹಿಕವಾಗಿ ಚರ್ಚೆಗಿಂತಲು ಮನಸ್ಸಿನ ಪ್ರಶಾಂತತೆಗೆ ಒತ್ತುಕೊಟ್ಟಿದೆ.

ನಾಮ ರೂಪ ಕ್ರಿಯೆಗಳಿಗೆ ಅತೀತನಾಗಿರುವ ಪರಮಾತ್ಮನು ಜಗತ್ತನು ತುಂಬಿಕೊಂಡು ಜಗದಗಲನಾಗಿದ್ದಾನೆ. ಜೀವ ಜಗತ್ತಿನ ವೈವಿಧ್ಯಗಳನ್ನೊಳಗೊಂಡಿರುವ ಪ್ರಕೃತಿಯ ನೈಜ ಸ್ವರೂಪವೇ ಆಗಿರುವ ಅರಣ್ಯವೆಲ್ಲವೂ ಪರಮಾತ್ಮನ ಸ್ವರೂಪವೇ ಆಗಿದೆ.ಆ ಅರಣ್ಯದಲ್ಲಿರುವ ಗಿಡ ಮರ ಬಳ್ಳಿಗಳೆಲ್ಲವೂ ಕಲ್ಪವೃಕ್ಷದಂತೆ ಇದ್ದು ಅವುಗಳಲ್ಲಿಯೂ ಲಿಂಗಚೈತನ್ಯ ಅವ್ಯಾಹತವಾಗಿ ತುಂಬಿಕೊಂಡಿದೆ.ಆ ಕಾಡಿನಲ್ಲಿ ನಿರಂತರ ಚಲಿಸುವ ಪಕ್ಷಿ-ಪ್ರಾಣಿಗಳೆಲ್ಲವೂ ಪರಮಾತ್ಮನ ಸ್ವರೂಪವೇ ಆಗಿದೆ.ಹೀಗೆ ಪರಮಾತ್ಮನು ಸರ್ವಭರಿತನಾಗಿ ಎಲ್ಲೆಲ್ಲೂ ತುಂಬಿಕೊಂಡು ಎಲ್ಲವೂ ಆಗಿದ್ದಾನೆ. ಇಷ್ಟೆಲ್ಲಾ ಪರಿಯಲ್ಲಿ ಇದ್ದರೂ ಅವ್ಯಕ್ತ ರೂಪದಲ್ಲಿ ಇರುವುದು ಸೋಜಿಗ.ಪ್ರಕೃತಿಯ ಎಲ್ಲ ಸಚರಾಚರಗಳಲ್ಲಿ ಲಿಂಗಚೈತನ್ಯವನ್ನು ಕಾಣಬೇಕಾದರೆ ಅಂಗ ಗುಣಗಳನ್ನು ಬಯಲಾಗಿಸಿ ಲಿಂಗ ಗುಣಗಳು ಕೂಡಿಕೊಂಡಿರುವ ದೇವ ದೃಷ್ಟಿ ಬೇಕಾಗುತ್ತದೆ. ಅದನ್ನು ಲಿಂಗದ ಅರಿವು-ಆಚಾರ-ಅನುಭಾವದಿಂದ ಸಂಪಾದಿಸಿ, ಸಾಕ್ಷಾತ್ಕಾರದ ಅನುಭವವನ್ನು ಪಡೆಯಲು ಸಾಧಕನು ಹಂಬಲಿಸುತ್ತಾನೆ. ಶಿವಶಕ್ತಿ ಸಂಪುಟದ ಆ ಮಹಾಲಿಂಗದ ಅರಿವಿಗಾಗಿ ಹಂಬಲಿಸಿ, ಸಾಧಿಸಿ, ಲಿಂಗದೊಡನೆ ಕೂಡಿ ಆ ಲಿಂಗವೇ ತಾನು ತಾನಾಗಿ ಮೂಲ ಚೈತನ್ಯವಾದ ಮಹಾಲಿಂಗದಲ್ಲಿ ನಿವೃತ್ತಿ ಹೊಂದುವುದೇ ಲಿಂಗಾಂಗ ಸಾಮರಸ್ಯದ ರಹಸ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


1. ಬಸವ ದರ್ಶನ ದೇ.ಜವರೇಗೌಡ
2. ವಿಷಯ ವಚನ ಸಂಪುಟಗಳು ಸಂ. ಡಾ.ಸಂಗಮೇಶ ಸವದತ್ತಿಮಠ
3. ಶರಣರ ಅನುಭಾವ ಸಾಹಿತ್ಯ ಡಾ.ಹೆಚ್. ತಿಪ್ಪೇರುದ್ರಸ್ವಾಮಿ
4. ಬಸವ ಧರ್ಮ - ಬಸವರಾಜಪ್ಪ ಗು. ಮೆಣಸಿನಕಾಯಿ
5. ವಚನ ಮಾರ್ಗ - ಪ್ರ, ಸಂ.ಡಾ.ಶಿವಮೂರ್ತಿ ಮುರುಘಾ ಶರಣರು